**ಇಂದು ದಿಃ18-07-2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲು**:** ಶ್ರೀ ಎ.ವಿ.ಎಂ ವಕೀಲರಿಂದ ಪ್ರತಿವಾದಿ ಪರ**:**

ಈ ದಾವೆಯನ್ನು ಚಂದ್ರಮ್ಮ ಮತ್ತು ಆಕೆಯ ಮಕ್ಕಳ ವಿರುದ್ಧ ಮಾಡಿದ್ದೇವೆ. ಈ ದಾವೆಯನ್ನು ಹಿಸ್ಸೆ ಬೇಕು ಎಂದು ಮಾಡಿದ್ದೇವೆ. ಈ ದಾವೆ ದಾಖಲು ಮಾಡಲು ನನ್ನ ಗಂಡ ಮತ್ತು ನಾವು ವಕೀಲರಿಗೆ ಮಾಹಿತಿ ಕೊಟ್ಟೇವು. ಸದರಿ ವಿಷಯವನ್ನು ನನ್ನ ವಾದಪತ್ರ ಮತ್ತು ಮುಖ್ಯವಿಚಾರಣೆಯಲ್ಲಿ ತಿಳಿಸಿದ್ದೇನೆ. ಪ್ರತಿವಾದಿಯರು ಈ ದಾವೆಯಲ್ಲಿ ಏನು ತಕರಾರು ಹಾಕಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ನನ್ನ ಮಾವನ ಹೆಸರು ಚಂದ್ರಪ್ಪ. ಚಂದ್ರಪ್ಪನ ತಂದೆಯ ಹೆಸರು ಸಿದ್ದಪ್ಪ ಇರುತ್ತದೆ. ಸಿದ್ದಪ್ಪನಿಗೆ 5 ಗಂಡು ಮಕ್ಕಳು. ಅವರೆಂದರೆ ಶಿವಪ್ಪ, ದೊಡ್ಡಮಲ್ಲಪ್ಪ, ಸಣ್ಣ ಮಲ್ಲಪ್ಪ, ಚಂದ್ರಪ್ಪ ಮತ್ತು ಸೂರ್ಯಪ್ಪ. ಶಿವಪ್ಪನ ಹೆಂಡತಿಯ ಹೆಸರು ಮಾಳಮ್ಮ. ಶಿವಪ್ಪ ಮತ್ತು ಮಾಳಮ್ಮ ತೀರಿಕೊಂಡಿದ್ದಾರೆ. ಅವರು ಯಾವ ಇಸವಿಯಲ್ಲಿ ತೀರಿಕೊಂಡರು ಎಂದು ಗೊತ್ತಿಲ್ಲ. ವಾದಿ ನಂಬರ್ 14, 18, 20 ಮತ್ತು ಶೇಖರಪ್ಪ ಹಾಗೂ ಗಣೇಶಪ್ಪ ಇವರ ಮಕ್ಕಳು. 15 ರಿಂದ 17 ನೇ ವಾದಿಯರು ಶೇಖರಪ್ಪನ ಹೆಂಡತಿ ಮತ್ತು ಮಕ್ಕಳು. 19 ನೇ ವಾದಿ ಗಣೇಶಪ್ಪನ ಹೆಂಡತಿ. ಅವರಿಗೆ ಮಕ್ಕಳು ಇಲ್ಲ.

ದೊಡ್ಡಮಲ್ಲಪ್ಪನ ಹೆಂಡತಿಯ ಹೆಸರು ಶಿವಗಂಗಮ್ಮ. ಇನ್ನೊಬ್ಬ ಹೆಂಡತಿಯ ಹೆಸರು ಶಾಂತಮ್ಮ. ಶಿವಗಂಗಮ್ಮ ತೀರಿಕೊಂಡಿದ್ದಾರೆ. 8 ಮತ್ತು 9 ನೇ ವಾದಿಯರು ಶಿವಗಂಗಮ್ಮನ ಮಕ್ಕಳು. ವಾದಿ ನಂಬರ್ 11 ರಿಂದ 13 ಇವರು 10 ನೇ ವಾದಿಯ ಮಕ್ಕಳು. ಸಣ್ಣಮಲ್ಲಪ್ಪ ಯಾರೂ ವಾರಸುದಾರರು ಇಲ್ಲದೇ ತೀರಿಕೊಂಡಿರುತ್ತಾರೆ. ಸಣ್ಣಮಲ್ಲಪ್ಪ ಇವನಿಗೆ ಕಮಲಮ್ಮ ಎಂಬ ಹೆಂಡತಿ ಇದ್ದಳು ಎಂದರೆ ಸಾಕ್ಷಿ ಆಕೆ ಬಹಳ ದಿನಗಳ ಹಿಂದೆ ತೀರಿಕೊಂಡಿರುತ್ತಾಳೆ ಎಂದು ಹೇಳುತ್ತಾರೆ.

ನನ್ನ ಅತ್ತೆಯ ಹೆಸರು ಮಾಳಮ್ಮ ಆಕೆ ತೀರಿಕೊಂಡಿದ್ದಾಳೆ. ಚಂದ್ರಪ್ಪ ಮತ್ತು ಮಾಳಮ್ಮ ಯಾವಾಗ ತೀರಿಕೊಂಡರು ಎಂದು ಗೊತ್ತಿಲ್ಲ. ಮೃತ 1 ನೇ ವಾದಿ ನನ್ನ

ಗಂಡ. ನನ್ನ ಮತ್ತು 1 ನೇ ವಾದಿಯ ಮದುವೆ ಸುಮಾರು 25 ವರ್ಷಗಳ ಹಿಂದೆ ಆಗಿರುತ್ತದೆ. ನನ್ನ ಮದುವೆಯ ಪೂರ್ವದಲ್ಲಿ ಸಿದ್ದಪ್ಪನ ಕುಟುಂಬದಲ್ಲಿ ಏನೇನು ವ್ಯವಹಾರಗಳು ಆಗಿವೆ ಎಂದು ನನಗೆ ಮಾಹಿತಿ ಇಲ್ಲ. ಸಾಕ್ಷಿ ಆದರೆ ಎಲ್ಲರೂ ಒಟ್ಟಿಗೆ ಇದ್ದೇವೆ ಎಂದು ಹೇಳುತ್ತಾರೆ. ನಾವೆಲ್ಲರೂ ಕೂಡಿ ಇದ್ದ ಬಗ್ಗೆ ತೋರಿಸಲು ದಾಖಲೆ ಹಾಜರುಪಡಿಸಿದ್ದೇನೆ. ಹೊಲದ ದಾಖಲೆಗಳನ್ನು ಹಾಜರುಪಡಿಸಿದ್ದೇನೆ.

ಸೂರ್ಯಪ್ಪನ ಹೆಂಡತಿಯ ಹೆಸರು ಚಂದ್ರಮ್ಮ, ಆಕೆ ತೀರಿಕೊಂಡಿರುತ್ತಾಳೆ. ಚಂದ್ರಮ್ಮ 7 ವರ್ಷಗಳ ಹಿಂದೆ ತೀರಿಕೊಂಡಿದ್ದಾಳೆ. ಪ್ರತಿವಾದಿ 2 ರಿಂದ 5 ಅವರ ಮಕ್ಕಳು. ಸೂರ್ಯಪ್ಪನಿಗೆ ಇನ್ನೊಬ್ಬ ಮಗ ಇದ್ದನು. ಆತ ತೀರಿಕೊಂಡಿದ್ದಾನೆ ಆತನ ಹೆಸರು ನೆನಪಿಲ್ಲ. ಸಿದ್ದಪ್ಪನ ಮಕ್ಕಳು ಯಾವ ಯಾವ ಇಸವಿಯಲ್ಲಿ ತೀರಿಕೊಂಡರು ಎಂದು ನನಗೆ ಮಾಹಿತಿ ಇಲ್ಲ. ಸೂರ್ಯಪ್ಪ ಕಿರ್ಲೋಸ್ಕರ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದನು ಎಂದರೆ ಸರಿಯಲ್ಲ. ಸಾಕ್ಷಿ ಕೂಲಿ ಕೆಲಸ ಮಾಡುತ್ತಿದ್ದನು ಎಂದು ಹೇಳುತ್ತಾರೆ. ಆತ ಹರಿಹರದ ಕಿರ್ಲೋಸ್ಕರ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರೂ, ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಕೇಳಿದ್ದು, ನೀಡಲಾಯಿತು.

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಹರಿಹರ.**